Allotment of Powerlooms Through Societies

880. **Sri C. K. RAJAIAH SHETTY** (Chicknayakanahalli).—

Will the Minister for Development be pleased to state:—

(*a*) the number of Powerlooms allotted through Societies in the State (Districtwise);

(*b*) the number of them working and not working;

(*c*) the action taken by Government to set in motion the idling unites?

Sri B. L. GOWDA (Deputy Minister for Co-operation).—

(*a*) 2,000 Powerlooms. (Districtwise allotment statement is appended).

(*b*) 983 are working and 1,017 are not working.

(*c*) Action has been taken to set in motion the idling looms by making available adequate working capital from Reserve Bank of India at concessional rate of interest, and also by reallotment of powerlooms to such of the societies which are able to run them.

STATEMENT

Sl. No.	District	No. of power-looms allotted
1	Mysore	28
2	Mandya	71
3	Hassan and Coorg	41
4	Chickmagalur	5
5	Shimoga	13
6	Mangalore (S.K.)	20
7	Chitradurga	76
8	Tumkur	106
9	Kolar	56
10	Bangalore	107
11	Bellary	43
12	Bidar	25
13	Raichur	95
14	Bijapur	499
15	Gulbarga	125
16	Belgaum	521
17	Dharwar	151
18	Karwar (N.K.)	18
	Total	2,000

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ ರಿಯಾಯಿತಿ ಬಡ್ಡಿದರದಲ್ಲಿ ಭಾರತದ ರಿಜರ್ವ್ ಬ್ಯಾಂಕಿನವರಿಂದ ಸಾಕಷ್ಟು ವರ್ಕಿಂಗ್ ಕ್ಯಾಪಿಟರ್ ಅನ್ನು ದೊರಕಿಸುವ ಮೂಲಕ ಕೆಲಸ ಮಾಡದೆ ನಿಂತಿರುವ ಮಗ್ಗಗಳನ್ನು ಚಾಲನೆಗೊಳಿಸಲು ಮತ್ತು ಮಗ್ಗಗಳನ್ನು ನಡೆಸಲು ಶಕ್ತವಾಗಿರುವಂಥ ಸಂಘಗಳಿಗೆ ಎದ್ಯುತ್ ಮಗ್ಗಗಳನ್ನು ಪುನಃ ಹಂಚಿಕೊಡಲು ಕ್ರಮವನ್ನು ಕೈಗೊಳ್ಳರಾಗಿದೆ ಎಂದು ಹೇಳಿದ್ದೀರಿ, ಅವರಿಗೆ ಎಷ್ಟು ಹಣವನ್ನು ಕೊಡಬೇಕೆಂದು ಬರೆದಿದ್ದೀರಿ, ಅಲ್ಲಿಂದ ಎಷ್ಟು ಹಣ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೀರಿ ?

† ಶ್ರೀ ಬಿ. ಎರ್. ಗೌಡ.—ಪ್ರತಿಯೊಂದು ಪವರ್ ಲೂಮಿಗೂ ದುಡಿಯುವ ಬಂಡವಾಳ ಎಂದು ಸೊಸೈಟಿಯಿಂದ ಒಂದು ಸಾವಿರ ರೂಪಾಯಿಗಳನ್ನೂ ರಿಜರ್ವ್ ಬ್ಯಾಂಕಿನಿಂದ 2,700 ರೂಪಾಯಿಗಳನ್ನು ಕೊಡುತ್ತಾರೆ.

ಶ್ರೀ ಸಿದ್ದಯ್ಯಕಾಶಿಮಠ.—ಸೊಸೈಟಿಗಳ ಮುಖಾಂತರ ಹಂಚಿಕೊಟ್ಟ ಪವರ್ ಲೂಮುಗಳನ್ನು ಬಹು ಭಾಗ ಮಾರಿದ್ದಾರೆಂದು ಗೊತ್ತಾಗಿದೆ. ಅಂಥವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಎರ್. ಗೌಡ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇನ್ನುಮುಂದೆ ಎಲ್ಲೆಲ್ಲ ಹೆನ್ನಾಗಿ ಕೆಲಸ ಮಾಡುತ್ತವೆಯೋ ಅಂಥ ಕಡೆಗಳಿಗೆ ಮಾತ್ರ ಕೊಡುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ರಾಜ್ಯದಲ್ಲಿ ಸಂಘಗಳ ಮೂಲಕ 2000 ಪವರ್ ಲೂಮ್‌ಗಳನ್ನು ಹಂಚಿಕೊಡಲಾಗಿದೆ ಎಂದು ಹೇಳಿದ್ದೀರಿ, ಅವುಗಳಲ್ಲ ಅನೇಕ ಪವರ್ ಲೂಮ್‌ಗಳು ಅನ್ ಸ್ಯಾಂಕ್ಷನ್ಡ್ ಪವರ್‌ಲೂಮ್‌ಗಳಾಗಿವೆ. ಆದ್ದರಿಂದ ಅವುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಶ್ರೀ ಬಿ. ಎರ್. ಗೌಡ.—ಅನ್‌ಸ್ಯಾಂಕ್ಷನ್ಡ್ ಪವರ್‌ಲೂಮ್‌ಗಳನ್ನು ನಷ್ಟೀಕೃತ ಮಾಡಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಐ. ಸೋಮಶೇಖರಪ್ಪ.—ಈಗ ಕೊಟ್ಟಿರತಕ್ಕ ಪವರ್‌ಲೂಮ್‌ಗಳು ಏನಿವೆ ಅವುಗಳಲ್ಲಿ 50 ಪರ್ಸೆಂಟ್ ಕೆಲಸಮಾಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎರ್. ಗೌಡ.—ಈ ಪವರ್ ಹ್ಯಾಂಡ್ಲೂಮ್‌ಗಳನ್ನು ನಡೆಸತಕ್ಕವರಿಗೆ ಸಾಕಷ್ಟು ದುಡಿಯುವ ಬಂಡವಾಳ ಇಲ್ಲ. ಸರಿಯಾದಂತಹ ಮಾರ್ಕೆಟ್ ಫೆಸಿಲಿಟೀಸ್ ಇಲ್ಲ ಮತ್ತು ವಿದ್ಯುಚ್ಛಕ್ತಿ ಸರಬರಾಜು ಇಲ್ಲ. ಸರಿಯಾದಂತಹ ಟೆಕ್ನಿಕರ್ ನೋಹೌ ಇಲ್ಲ. ಈ ಕಾರಣಗಳಿಂದ ಅವುಗಳು ಕೆಲಸ ಮಾಡುತ್ತಿಲ್ಲ.

ಶ್ರೀ ಎಂ. ನಾಗಪ್ಪ.—ರಾಯಚೂರಿಗೆ 95 ಪವರ್‌ಲೂಮ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ, ಅವುಗಳನ್ನೆಲ್ಲಾ ತೆಗೆದುಕೊಂಡವರು ಮಾರಾಟ ಮಾಡಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದು ಸರ್ಕಾರದ ಗಮನಕ್ಕೆ ಬಂದಿದ್ದರೆ, ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎರ್. ಗೌಡ.—ಮಾರಾಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

2.00 P.M.

Selection to the Posts of Probationary Sub-Inspectors

Sri SIDDAIAH KASHIMATH (Shirahatti).—

Will the Chief Minister be pleased to state :—

(*a*) the number of applications received for the post of probationary Sub-Inspectors ;

(*b*) of them, the number of persons selected ;

(*c*) the number of persons who have passed in the examination ?